# ಮುಳ್ಳು

ಮರೆ ಅವನನ್ನು
ಅವನೇನು ನಿನ್ನ
ಗಂಡನೇ, ಮಾವನೇ
ಭಾವನೇ, ಅಣ್ಣನೇ
ತಮ್ಮನೇ?
ಏನಾಗಬೇಕು ನಿನಗೆ?


ನಿನಗೆ ಏನೂ ಅಲ್ಲದವನನ್ನು
ಗಾಯಗೊಳಿಸಿದವನನ್ನು
ಎದೆಯೊಳಗಿಟ್ಟು
ಕಾಪಿಡುವುದು ಏಕೆ?

ಅವನು ಮುಳ್ಳೆಂದು ತಿಳಿ
ಹಾಗೇ ಬಿಟ್ಟರೆ ನೋವು
ಕಿತ್ತು ಬಿಸಾಡು
ಎಂದರು ಅವರು

ಅವರಿಗೆ ಗೊತ್ತಿಲ್ಲ
ಆ ಮುಳ್ಳು
ಎಲ್ಲ ಮುಳ್ಳಿನಂತಲ್ಲ
ಅದು ಚುಚ್ಚುವುದರಲ್ಲೂ
ಒಂದು ಸುಖವಿದೆ

ಮುಳ್ಳು ಚುಚ್ಚುತ್ತಲೇ ಇರಲಿ

● **ಸಹನಾ ಕಾಂತಬೈಲು**



ಕಲೆ: ವೆಂಕಟ್ರಮಣ ಭಟ್